**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 371/2018**

ಚಾ.ಸಾ–01, ಪ್ರಾ.ಸಾ–01

| | | |
|---|---|---|
| ಹೆಸರು | : | ನಂದಿನಿ |
| ಗಂಡನ ಹೆಸರು | : | ರವಿಕುಮಾರ್ |
| ವಯಸ್ಸು | : | 32 |
| ವೃತ್ತಿ | : | ಖಾಸಗಿ ಕೆಲಸ |
| ವಾಸ | : | ಹಾರೋಹಳ್ಳಿ ಗ್ರಾಮ, ಮೈಸೂರು ತಾಲ್ಲೂಕು. |

**ದಿನಾಂಕ 10.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾಸಾ–2 ನನ್ನ ತಂದೆ. ಚಾಸಾ–3 ರಿಂದ 5 ರವರ ಪರಿಚಯವಿದೆ. ಈ ದಿನ ನ್ಯಾಯಾಲಯದಲ್ಲಿರುವ 1ನೇ ಆರೋಪಿತ ನನ್ನ ಗಂಡ. 2ನೇ ಆರೋಪಿತಳು ನನ್ನ ಅತ್ತೆ. 3ನೇ ಆರೋಪಿತ ನನ್ನ ಮೈದುನ. 4ನೇ ಆರೋಪಿತಳು ನನ್ನ ಗಂಡನ ಅತ್ತಿಗೆ. 2 ರಿಂದ 4ನೇ ಆರೋಪಿತರು ಗೈರುಹಾಜರಾಗಿದ್ದು, ಅವರ ಗುರುತಿಸುವಿಕೆಯ ಬಗ್ಗೆ ಅವರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

ನನ್ನ ಮತ್ತು 1ನೇ ಆರೋಪಿತನ ವಿವಾಹವು ದಿನಾಂಕ 04.07.2010 ರಂದು ಆಗಿರುತ್ತದೆ. ವಿವಾಹವಾದ ಎರಡು ವರ್ಷಗಳವರೆಗೆ ಚೆನ್ನಾಗಿದ್ದೆವು. ನನ್ನ

ಮತ್ತು 1ನೇ ಆರೋಪಿತನ ವೈವಾಹಿಕ ಸಂಬಂಧದಿಂದ ಒಂದು ಹೆಣ್ಣುಮಗು ಜನಿಸಿರುತ್ತದೆ. ಆಕೆಯ ಹೆಸರು ನಮ್ರತಾ ಡಿ.ಎನ್. ಆಕೆಗೆ ಈಗ 15 ವರ್ಷ.

ವಿವಾಹವಾದ ಎರಡು ವರ್ಷಗಳ ನಂತರ 1ನೇ ಆರೋಪಿತ ಸರಿಯಾಗಿ ಮನೆಗೆ ಬರುತ್ತಿರಲಿಲ್ಲ. ಸರಾಯಿ ಕುಡಿಯುತ್ತಿದ್ದರು. ನನಗೆ ಅನಾರೋಗ್ಯವಾದಾಗ ನನ್ನನ್ನು ನೋಡಿಕೊಳ್ಳುತ್ತಿರಲಿಲ್ಲ. ನನ್ನ ತಂದೆ ಮನೆಗೆ ಕಳುಹಿಸುತ್ತಿದ್ದರು. ಆತ 4ನೇ ಆರೋಪಿತಳೊಂದಿಗೆ ಅನೈತಿಕ ಸಂಬಂಧ ಹೊಂದಿದ್ದರು. ಹಾಗಾಗಿ, ನನ್ನ ಮತ್ತು ಅವರ ನಡುವೆ ಆಗಾಗ ಗಲಾಟೆ ಆಗುತ್ತಿತ್ತು.

ನನ್ನ ಮತ್ತು 1ನೇ ಆರೋಪಿತನ ನಡುವೆ ಸುಮಾರು 7-8 ಬಾರಿ ಹಿರಿಯರು ಪಂಚಾಯಿತಿ ಮಾಡಿರುತ್ತಾರೆ. ನಾನು ತಿ. ನರಸೀಪುರ ಪೊಲೀಸ್ ಠಾಣೆ ಮತ್ತು ಮೈಸೂರಿನ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ.

ದಿನಾಂಕ 19.07.2017 ರಂದು ತುಂಬಲ ಗ್ರಾಮದಲ್ಲಿ 1ನೇ ಆರೋಪಿತನ ಮನೆಯಲ್ಲಿ ಆರೋಪಿತರೆಲ್ಲರೂ ನನ್ನ ಜೊತೆ ಗಲಾಟೆ ಮಾಡಿ 4ನೇ ಆರೋಪಿತಳು ನನ್ನ ಕಪಾಲಕ್ಕೆ ಹೊಡೆದಿರುತ್ತಾಳೆ. ಆಕೆಯು ನನ್ನನ್ನು ಉದ್ದೇಶಿಸಿ, ನಾನು 1ನೇ ಆರೋಪಿತನೊಂದಿಗೆ ವೈವಾಹಿಕ ಜೀವನ ಮಾಡಲು ಬಿಡುವುದಿಲ್ಲವೆಂದು ಹೇಳಿರುತ್ತಾಳೆ.

ಗಲಾಟೆಯಾದ 4-5 ದಿನಗಳ ನಂತರ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದು, ಆನಂತರ 4-5 ದಿನಗಳ ನಂತರ ಮೈಸೂರಿನ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು ನಿಪಿ.1(ಎ) ಎಂದು ಗುರುತಿಸಲಾಯಿತು.

ದೂರನ್ನು ನೀಡಿದ 3 ದಿನಗಳ ನಂತರ 1ನೇ ಆರೋಪಿತನ ಮನೆಗೆ ಪೊಲೀಸರು ಬಂದು ವಿಚಾರಣೆ ಮಾಡಿ ಪಂಚನಾಮವನ್ನು ಜರುಗಿಸಿ, ನನ್ನ ಮತ್ತು ಹಿರಿಯರ ಸಹಿ ಪಡೆದಿರುತ್ತಾರೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.2 ಮತ್ತು ನಿಪಿ.2(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ ಕೆ.ಎಸ್. ವಕೀಲರಿಂದ 1 ರಿಂದ 3ನೇ ಆರೋಪಿತರ ಪರವಾಗಿ :**

ನಾನು ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿದ್ದೇನೆ. 1ನೇ ಆರೋಪಿತನನ್ನು ನಾನು ವಿವಾಹವಾಗುವ ಪೂರ್ವದಲ್ಲಿ ಆತನ ಹಿನ್ನೆಲೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದೂರನ್ನು ನಾನು ಬರೆದಿಲ್ಲ. ನನ್ನ ಹೇಳಿಕೆಯ ಪ್ರಕಾರ ಪೊಲೀಸರು ಬರೆದಿರುತ್ತಾರೆ. ದೂರನ್ನು ಅವರು ನನಗೆ ಓದಿ ಹೇಳಿದ ನಂತರ ನಾನು ಸಹಿ ಮಾಡಿರುತ್ತೇನೆ. ದೂರಿನಲ್ಲಿ ಯಾವ ಸಮಯದಲ್ಲಿ

ಗಲಾಟೆಯಾಯಿತು ಎಂದು ಹೇಳಿರುತ್ತೇನೆ. ಆ ಬಗ್ಗೆ ದೂರಿನಲ್ಲಿ ನಮೂದು ಇಲ್ಲ ಎಂದರೆ ಸರಿ.

ತುಂಬಲ ಗ್ರಾಮದಲ್ಲಿ 1 ರಿಂದ 3ನೇ ಆರೋಪಿತರು ಮತ್ತು 1ನೇ ಆರೋಪಿತನ ತಂದೆ ವಾಸವಾಗಿರುತ್ತಾರೆ ಎಂದರೆ 2, 3ನೇ ಆರೋಪಿತರು ಮತ್ತು 1ನೇ ಆರೋಪಿತನ ತಂದೆ ವಾಸವಾಗಿದ್ದು, 1ನೇ ಆರೋಪಿತ ಹುರಳಿಕ್ಯಾತನಹಳ್ಳಿಯಲ್ಲಿ ವಾಸವಾಗಿರುತ್ತಾರೆ.

ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀನಾ ಎಂದರೆ ನೆನಪಿಲ್ಲ. ಸಾಮಾನ್ಯವಾಗಿ ಹಳ್ಳಿಯಲ್ಲಿ ಒಂದು ಮನೆಯ ಜನರು ರಾತ್ರಿ ಸಮಯದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ.

ದಿನಾಂಕ 14.09.2017 ರಂದು ದೂರನ್ನು ನೀಡಿರುತ್ತೇನೆ ಎಂದರೆ ನೆನಪಿಲ್ಲ. ಆ ದೂರಿನಲ್ಲಿ ದಿನಾಂಕ 10.09.2017 ರಂದು ಗಲಾಟೆ ನಡೆದಿದೆ ಎಂದು ಹೇಳಿದ್ದೇನೆ ಎಂದರೆ ಸರಿ.

1ನೇ ಆರೋಪಿತ ತನ್ನ ಅಜ್ಜಿಯ ಜೊತೆ ಈ ಮೇಲೆ ಹೇಳಿದ ಹುರಳಿ ಕ್ಯಾತನಹಳ್ಳಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಆ ಗ್ರಾಮದಿಂದ ತುಂಬಲ ಗ್ರಾಮಕ್ಕೆ 30 ಕಿ.ಮೀ. ಅಂತರವಿದೆ ಎಂದರೆ ಸರಿ. 1ನೇ ಆರೋಪಿತ ಮೈಸೂರಿಗೆ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ನಾನು ಅವರ ಮನೆಯಲ್ಲಿ ವಾಸವಾಗಿದ್ದಾಗ

ಅವರು ಹೋಗುತ್ತಿದ್ದರು, ಈಗ ಹೋಗುತ್ತಿದ್ದಾರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

1ನೇ ಆರೋಪಿತ ಚಿಕ್ಕ ವಯಸ್ಸಿನಿಂದಲೂ ತನ್ನ ಅಜ್ಜಿಯನ್ನು ನೋಡಿಕೊಂಡು ಸದರಿ ಹುರಳಿ ಕ್ಯಾತನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ, ಈಗ ನನಗೆ ಗೊತ್ತಿಲ್ಲ. ಹಾಗಾಗಿ, ವಯಸ್ಸಾದ ತನ್ನ ಅಜ್ಜಿಯನ್ನು ನೋಡಿ ಕೊಳ್ಳುವ ಸಲುವಾಗಿ ಆತ ರಾತ್ರಿ ವೇಳೆಯಲ್ಲಿಯೂ ತನ್ನ ಅಜ್ಜಿಯ ಮನೆಯಲ್ಲಿರುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ.

ನಾನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಹೋದಾಗ 1ನೇ ಆರೋಪಿತ ನನಗೆ ಕಬ್ಬಿಣದ ರಾಡಿನಿಂದ ಹೊಡೆದಿರುತ್ತಾನೆಂದು ಹೇಳಿಲ್ಲ. ನಾನು 1ನೇ ಆರೋಪಿತನನ್ನು ವಿವಾಹವಾದ ನಂತರ ತುಂಬಲ ಗ್ರಾಮದಲ್ಲಿ ಮತ್ತು ಹುರಳಿ ಕ್ಯಾತನಹಳ್ಳಿ ಗ್ರಾಮದಲ್ಲಿ ವಾಸಿಸುವುದಿಲ್ಲವೆಂದು ಹೇಳಿ, ಮೈಸೂರಿನಲ್ಲಿ ಮನೆ ಮಾಡಬೇಕೆಂದು ಆತನಿಗೆ ಒತ್ತಾಯ ಮಾಡಿದ್ದೆ ಎಂದರೆ ಸರಿಯಲ್ಲ. ಆ ಹಿನ್ನೆಲೆಯಲ್ಲಿ ನಾನು ಆತನೊಂದಿಗೆ ಗಲಾಟೆ ಮಾಡಿ ನನ್ನ ತಂದೆಯ ಮನೆಗೆ ಹೊಗುತ್ತಿದ್ದೆ ಎಂದರೆ ಸರಿಯಲ್ಲ. ನಮ್ಮ ತವರು ಮನೆಯ ಗ್ರಾಮದವರು ಮತ್ತು ಆತನ ಗ್ರಾಮದವರು ನನಗೆ ಬಹಳಷ್ಟು ಬಾರಿ ತಿಳುವಳಿಕೆ ಹೇಳಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ತಿಳುವಳಿಕೆ ಹೇಳಿದ ನಂತರವೂ ನಾನು ಆತನೊಂದಿಗೆ ಗಲಾಟೆ ಮಾಡಿ 2017 ರಲ್ಲಿ ನನ್ನ ತಂದೆ ಮನೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಆನಂತರ, ನನ್ನನ್ನು ಕರೆಯಲು ಆತ 2-3 ಬಾರಿ ಬಂದಿರುತ್ತಾನೆ

ಎಂದರೆ ಸರಿಯಲ್ಲ. ನನ್ನ ತಂದೆ ತಾಯಿರವರು ಕೂಡ ನನ್ನನ್ನು ಆತನ ಮನೆಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ.

4ನೇ ಆರೋಪಿತಳು ಚಟ್ನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾಳೆ ಎಂದರೆ ಹುರಳಿ ಕ್ಯಾತನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾಳೆ. ಆಕೆಯು ಹುರಳಿಕ್ಯಾತನಹಳ್ಳಿ ಗ್ರಾಮದಲ್ಲಿ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ.

ನಾನು ಹೇಳುವಂತೆ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದಂತೆ ಮೈಸೂರಿನಲ್ಲಿ 1ನೇ ಆರೋಪಿತ ಮನೆಯನ್ನು ಮಾಡದ ಕಾರಣ ಆತನ ವಿರುದ್ದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆತ ನನ್ನನ್ನು ಕರೆದರು ಕೂಡ ನಾನು ಆತನ ಜೊತೆ ಹೋಗದೆ ಆತನ ವಿರುದ್ದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

1ನೇ ಆರೋಪಿತ ಹುರಳಿ ಕ್ಯಾತನಹಳ್ಳಿಯಲ್ಲಿ ವಾಸವಾಗಿದ್ದರಿಂದ ಆತ ಎಂದೂ ಕೂಡ ತುಂಬಲ ಗ್ರಾಮದಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ಜರುಗಿಲ್ಲದಿದ್ದರೂ ಕೂಡ ಉದ್ದೇಶಪೂರ್ವಕವಾಗಿ ಆರೋಪಿತರ ವಿರುದ್ದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿತ ನನ್ನ ಮಾತನ್ನು ಕೇಳಿಲ್ಲ ಎಂದು ಆತನ ವಿರುದ್ದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ತುಂಬಲ ಗ್ರಾಮದಲ್ಲಿ ವಾಸಿಸಲು ಇಷ್ಟವಿಲ್ಲ ಎಂದರೆ ಸರಿಯಲ್ಲ. ನಾನು ಮೈಸೂರಿನಲ್ಲಿ ವಾಸಿಸಿ ಕೆಲಸಕ್ಕೆ ಹೋಗಲು ನನಗೆ ಇಷ್ಟ ಎಂದರೆ ಸರಿಯಲ್ಲ.

4ನೇ ಆರೋಪಿತಳು 1ನೇ ಆರೋಪಿತನ ಸೋದರಮಾವನ ಹೆಂಡತಿ ಎಂದರೆ ಸರಿಯಲ್ಲ, ಆತನ ಅತ್ತಿಗೆಯಾಗಿರುತ್ತಾಳೆ. 1ನೇ ಆರೋಪಿತ ತನ್ನ ಅಜ್ಜಿಯನ್ನು ಬಿಟ್ಟು ಮೈಸೂರಿಗೆ ಬರಲು ಆಗುವುದಿಲ್ಲ ಎಂದು ಹೇಳಿದ್ದರೂ ಕೂಡ ಆತನ ಮಾತಿಗೆ ಬೆಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಪಂಚನಾಮದ ವಿಷಯಗಳ ಬಗ್ಗೆ ನನಗೆ ನೆನಪಿಲ್ಲ. 1 ರಿಂದ 3ನೇ ಆರೋಪಿತರ ಮನೆ ಕಲ್ನಾರ್ ಶೀಟ್‌ನ ಮನೆ ಎಂದರೆ ಸರಿ. 1ನೇ ಆರೋಪಿತ ನನ್ನ ಮಗಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಆತ ನನ್ನ ಮಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದಾನೆ ಎಂದರೆ ಸರಿಯಲ್ಲ. ಆತ ನನ್ನ ಮೊಬೈಲ್‌ಗೆ ಹಣವನ್ನು ಕಳುಹಿಸುತ್ತಿದ್ದಾನೆ ಎಂದರೆ ಸರಿಯಲ್ಲ. ಆ ಎಲ್ಲಾ ವಿಷಯಗಳು ಜರುಗಿದರು ಕೂಡ ನಾನು ಆರೋಪಿತರ ವಿರುದ್ದ ಸುಳ್ಳು ಆರೋಪ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದ. ತಿ.ನರಸೀಪುರ**